

ಮುಕುಂದ ಜೋಷಿ ಮತ್ತು ಜಯಂತ ಕಾಯ್ಕಿಣಿ (1988)

ಬಂದು ಕುಡಿಸಿದರು. ಅಭಯದ ಆಗರದಂತೆ ನಮ್ಮೆಲ್ಲರನ್ನೂ ತಬ್ಬಿ 'ಬರ್ರಿ' ಎಂದು ಬೀಳ್ಕೊಟ್ಟರು. ಆಗಲೇ ಅಲ್ಲೊಬ್ಬ ಬೀದಿ ಚಿಂದಿ ಆಯುವ ಹುಡುಗ ಖಾಲಿ ಪೆಪ್ಸಿ ಕ್ಯಾನನ್ನು ಕಾಲಿಂದ ಒದೆಯುತ್ತ ಬಂದ. ಅದು ಚಿಮ್ಮಿ ಆ ಬಸ್ಸಿನ ಅಡಿಗೆ ಹೋಗಿಬಿಟ್ಟಿತು. ಅದನ್ನು ಅದರ ಪಾಡಿಗೆ ಬಿಟ್ಟು ಹೋಗುವ ಮನಸ್ಸು ಅವನಿಗಿರಲಿಲ್ಲ. ಏಕೆಂದರೆ ಅದರಿಂದ ಅವನದೇ ಒಂದು ಲಯ ಭಂಗವಾಗಬಹುದಾಗಿತ್ತು. ಅವನೂ ಬಸ್ಸು ಹೊರಡಲು ಕಾಯುತ್ತ ಬಸ್ಸಿನ ಡ್ರೈವರು ಮತ್ತು ಸಹಾಯಕರ ಜೊತೆಗೆ ಸಂಭಾಷಣೆ ನಡೆಸಿದ್ದ. ಕೊನೇ ಗಳಿಗೆಯಲ್ಲಿ ಪ್ರತ್ಯಕ್ಷನಾಗಿ ಇಡೀ ಬಸ್ಸನ್ನೇ ತಾಬೆಯಲ್ಲಿ ತಗೊಂಡವನಂತೆ ಇದ್ದ. ಬಸ್ಸು ಹೊರಟಾಗ ಬಸ್ಸಿಗೆ ಮುಕುಂದರ ಜೊತೆ ಅವನೂ ಕೈಬೀಸಿದ. ಇದಾದ ಎಷ್ಟೋ ವರುಷಗಳ ನಂತರ ನನ್ನ ಕಥೆಯೊಂದರಲ್ಲಿ ಆ ಹುಡುಗ ಪೆಪ್ಸಿ ಕ್ಯಾನನ್ನು ಒದೆಯುತ್ತ ಹಾಗೆಯೇ ಬಂದು ಅಂದು ಉಸುರಿದ್ದನ್ನು ಹೇಳಿ ಹೋದ. ಅದಾದ ಕೆಲವು ವರುಷಗಳ ನಂತರ ಮುಂಬಯಿಯ ಅವರ ಮನೆಯಲ್ಲಿ (ಇದರ ನಂತರ ಮತ್ತೆ ಮುಲಾಖಾತ್ ಆಗಲಿಲ್ಲ) ಸಿಕ್ಕಾಗ, ಥಟ್ಟಂತ, "ಆ ಹುಡುಗನ್ನ ಇನ್ನೂ ಸಾಕ್ಕೊಂಡೀರಲ್ಲ ಕಥೇಲಿ" – ಎಂದರು. ಮುಕುಂದರಿಗೆ "ಎಹಸಾಸ್" (ಅರಿವು) ಮತ್ತು "ಮೆಹಸೂಸ್" (ಅನುಭೂತಿ) ಈ ಎರಡೂ ಶಬ್ದಗಳು ಅಂದ್ರೆ ಪ್ರಾಣ.

ಕಣ್ಣೆದುರೇ ಇರುವವರು ಕಣ್ಮರೆಯಾದರೆ ಅದೊಂದು ಬಗೆಯ ಅಸಹಾಯಕ, ತೀರ ಭೌತಿಕವಾದ ಶೂನ್ಯ. ('ಮನೆಯಂಗಳದ ಕರಿಮಾವಿನ ಮರ ಉರುಳಿ ಬಾನಿಗೇ ದೊಡ್ಡ ತೂತು' – ಗಂಗಾಧರ ಚಿತ್ತಾಲ). ಆದರೆ ಸಂವೇದನೆಯ, ಆತ್ಮಸಾಕ್ಷಿಯ ಭಾಗವೇ ಆಗಿಹೋದ ಆಪ್ತರು, ಕಣ್ಣಾಚೆಗೆ ತೀರಿಕೊಂಡರೆ ಅದೊಂದು ಮಾಹಿತಿಯಾಗಿ ಕಾಡಿದರೂ ಮನಸಲ್ಲಿ ಅವರ ಹಾಜರಿ ಏನೇನೂ ಬದಲಾವಣೆ ಇಲ್ಲದೆ ಮುಂದುವರೆಯುತ್ತದೆ. ಇನ್ನೂ ತೀವ್ರವೇ ಆಗುತ್ತದೆ. ಜೀವಸಂಕುಲದ